

# ಬೊಂಬೆಗಳಲ್ಲಿ ಕರುಳಕುಡಿಯ ಬಿಂಬಗಳು

■ ಶಶಿಕುಮಾರ್ ಸಿ.
ಚಿತ್ರಗಳು: ರಂಜು ಪಿ.



ಕೆ.ವಿ. ಶ್ರೀನಿವಾಸ್ ಮತ್ತು ಪ್ರಭಾವತಿ ದಂಪತಿ

ಆ ಮನೆಗೆ ಕಾಲಿಟ್ಟೊಡನೆ ಕಣ್ಣಿಗೆ ಕಾಣುವುದೇ ಬೊಂಬೆಗಳು. ಮೂಲೆ ಮೂಲೆಯಲ್ಲೂ ಅವುಗಳದ್ದೇ ಕಾರುಬಾರು. ಎರಡು ಅಂತಸ್ತಿನ ಆ ಇಡೀ ಮನೆಯಲ್ಲಿ ಮೂರು ಸಾವಿರಕ್ಕೂ ಅಧಿಕ ಸಣ್ಣ, ಅತಿಸಣ್ಣ, ಮಧ್ಯಮ ಗಾತ್ರದ ಬೊಂಬೆಗಳಿವೆ. ಬೊಂಬೆಗಳ ಸಾಮ್ರಾಜ್ಯವೇ ಆ ಮನೆಯಲ್ಲಿದೆ. ಹೀಗಾಗಿಯೇ ಆ ಮನೆಯನ್ನು ‘ಬೊಂಬೆಮನೆ’ ಎಂದು ಕರೆಯಲಾಗುತ್ತದೆ.

ಬೆಂಗಳೂರಿನ ಕತ್ರಿಗುಪ್ಪೆಯಲ್ಲಿರುವ ಆ ಮನೆ ಕೆ.ವಿ. ಶ್ರೀನಿವಾಸ್ (86) ಹಾಗೂ ಕೆ.ಎಸ್. ಪ್ರಭಾವತಿ (82 ವರ್ಷ) ದಂಪತಿಯದ್ದು. ತ ಮ್ಮನ್ನೇ ಯಾರಾದರೂ ಆರೈಕೆ ಮಾಡಬೇಕಾದ ವಯಸ್ಸು ಅವರದ್ದು. ಅವರೇ ತಮ್ಮ ಮನೆಯಲ್ಲಿರುವ ಬೊಂಬೆಗಳನ್ನು ಮಕ್ಕಳಂತೆ ಆರೈಕೆ ಮಾಡುತ್ತಿದ್ದಾರೆ. ಅವುಗಳನ್ನು ನೋಡುತ್ತಲೇ, ನಲಿದು, ಸಂಭ್ರಮಿಸಿ ದಿನದೂಡುತ್ತಾರೆ.

ಹವ್ಯಾಸ ಅನ್ನೋದು ನೆರಳಿದ್ದಂತೆ. ಅದರೊಂದಿಗಿನ ನಂಟು ಬಿಟ್ರೂ ಬಿಡದೆ ಇರುವಂತಹದ್ದು. ಅದು ದೂರವಾಗುವುದು ಉಸಿರು ನಿಂತಾಗ. ಅಲ್ಲಿಯವರೆಗೂ ಒಂದಿಲ್ಲೊಂದು ರೀತಿಯಲ್ಲಿ ಅದರೊಂದಿಗೆ ನಂಟು ಬೆಸೆದುಕೊಂಡೇ ಇರುತ್ತದೆ. ಹಾಗೆಯೇ, ಹವ್ಯಾಸಕ್ಕೆ ಶುರುವಾದ ಬೊಂಬೆ ಸಂಗ್ರಹ ಇಂದು ಆ ದಂಪತಿಯ ಜೀವನದ ಭಾಗವಾಗಿಯೇ ಬೆಸೆದುಕೊಂಡಿದೆ.

ಬೊಂಬೆಗಳ ವಿಷಯಕ್ಕೆ ಬರೋದಾದರೆ, ಅವರ ಮನೆಯಲ್ಲಿ ಸಣ್ಣ, ಅತಿಸಣ್ಣ ಹಾಗೂ ಮಧ್ಯಮ ಗಾತ್ರದ ಮೂರು ಸಾವಿರಕ್ಕೂ ಅಧಿಕ ಬೊಂಬೆಗಳಿವೆ. ಹಾಡುವ, ನರ್ತಿಸುವ ಬೊಂಬೆಗಳು ಮನೆಹೊಕ್ಕಾಗ ಆಕರ್ಷಿಸಿದರೆ, ‘ನಾನು ಯಾರಿಗೇನು ಕಮ್ಮಿ ಇಲ್ಲ’ ಎಂಬಂತೆ ಹಾಡಿನ ತಾಳಕ್ಕೆ ತಕ್ಕಂತೆ ಮೈ ಕುಲುಕಿಸುವ ‘ಟೋಪಿವಾಲ’ ಮುಖದಲ್ಲಿ ಮಂದಹಾಸ ಬೀರುತ್ತಾನೆ.

ನಿರ್ದಿಷ್ಟ ಥೀಮ್‌ನ ತರಹೇವಾರಿ ಬೊಂಬೆಗಳು ಅಲ್ಲಿವೆ. ಅಪ್ಪ, ಅಮ್ಮ ಹಾಗೂ ಮಕ್ಕಳ ಜೀವನಶೈಲಿ ಕಟ್ಟಿಕೊಡುವ ಬೊಂಬೆಗಳು, ಮನೆಯ ವಾತಾವರಣ ಕಟ್ಟಿಕೊಡುವ ಮಾದರಿ, ಸಾಮಾಜಿಕ ಬದುಕು, ಆಚಾರ–ವಿಚಾರ, ಸಂಸ್ಕೃತಿ, ಜನಜೀವನದ ಚಿತ್ರಣವನ್ನು ಬೊಂಬೆಗಳ ರೂಪದಲ್ಲಿ ಅಲ್ಲಿ ಕಾಣಬಹುದು.

ಸ್ಪರ್ಶಿಸಿದರೆ ಧ್ವನಿ ಹೊರಡಿಸುವ ಕುದುರೆ, ತೂಗಾಡುವ ಕೋಬ್ರಾ,